
ದ್ವಂದ್ವಗಳಿಗೂ ಮುಖಾಮುಖಿಯಾಗುತ್ತದೆ. ಆ ಮೂಲಕ ಕನ್ನಡದಲ್ಲಿ ಇತ್ತೀಚೆಗೆ ಮಾಯವಾಗುತ್ತಿರುವ ಪ್ರಧಾನ ಧಾರೆಯ ವಿಚಾರ-ಸಾಹಿತ್ಯ ಮಾದರಿಯ ಓದನ್ನು ಓದುಗರ ಮುಂದಿಡುತ್ತದೆ.

ಇತಿಹಾಸದುದ್ದಕ್ಕೂ ಹೆಂಗಸರು ಸಮಾಜ ತಮಗೆ ವಿಧಿಸಿದ ಕರ್ತವ್ಯಗಳು ಎಂಬ ಕಟ್ಟುಪಾಡುಗಳಿಂದ ಹೊರಗುಳಿಯಲು ಒಳದಾರಿಗಳನ್ನು ಕಂಡು ಕೊಳ್ಳುತ್ತಲೇ ಬಂದಿದ್ದಾರೆ. ವಿದ್ಯೆ ಮತ್ತು ವೃತ್ತಿ ಇಂದಿನ ಹೆಣ್ಣಿಗೆ ನೀಡಿರುವ ಸ್ವಾಯತ್ತತೆಯನ್ನು ಎರಡೂವರೆ ಸಾವಿರ ವರ್ಷಗಳ ಹಿಂದೆ ಬೌದ್ಧ ಸಂಘಗಳು ಅಂದಿನ ಹೆಣ್ಣಿಗೆ ನೀಡಿರಬಹುದೇ ಎಂಬ ಆಸಕ್ತಿಕರ ವಿಚಾರವನ್ನು ಲೇಖಕಿ ಮಂಡಿಸುತ್ತಾರೆ. ಈಗಲೂ ಸಮಾಜದ ಗೌರವಕ್ಕೆ ಮಹಿಳೆಯೊಬ್ಬಳು ತ್ವರಿತವಾಗಿ ಅರ್ಹವಾಗಬಲ್ಲ ಏಕೈಕ ಮಾರ್ಗವಾದ ವಿವಾಹವನ್ನು ಭಿಕ್ಕುಣಿಯರು ತ್ಯಜಿಸಿ, ಪಿತೃಪ್ರಧಾನ ವ್ಯವಸ್ಥೆ ನೀಡುವ ಆಮಿಷಗಳನ್ನು ಆ ಕಾಲದಲ್ಲೇ ಧಿಕ್ಕರಿಸಿದ್ದರು ಎಂಬ ಅಂಶವನ್ನು ತರ್ಕಿಸುತ್ತಾರೆ.

ಹಾಗಂತ ಈ ಭಿಕ್ಕುಣಿಯರ ಬದುಕು ಸುಲಭದ್ದಾಗಿತ್ತೇ? ಕುಟುಂಬ ವ್ಯವಸ್ಥೆಯಿಂದ ಆಚೆಗಿರುವ ಅವರು ಸುತ್ತಣ ಸಮಾಜದಿಂದ ಹಲವು ಅಪಾಯಗಳನ್ನು ಎದುರಿಸಬೇಕಾಗುತ್ತಿತ್ತು. ವೇಶ್ಯೆಯರು, ನಟಿಯರು, ನರ್ತಕಿಯರು ಮತ್ತು ಸಂಗೀತಗಾರ್ತಿಯರ ಜೊತೆಗೆ ಈ ಅಲೆಮಾರಿ ಸನ್ಯಾಸಿನಿಯರೂ ಯಾವುದೇ ಒಬ್ಬ ಪುರುಷನಿಗೆ ಸೇರದ ಕಾರಣ ಅವರು ಎಲ್ಲರಿಗೂ ಸೇರಿದವರು ಎಂಬ ಭಾವವೇ ಜನಜನಿತವಾಗಿತ್ತು. ಸುರಕ್ಷತೆಯ ಕಾರಣಕ್ಕೆ ಬೌದ್ಧ ಸನ್ಯಾಸಿನಿಯರು ವಾಸಿಸುವ ವರ್ಷಕಗಳು ನಗರದ ಪರಿಧಿಯೊಳಗೆ ಇರುತ್ತಿದ್ದವು. ಭಿಕ್ಕುಣಿಯರು ನಗರದ ಒಳಗೆ ವಾಸಿಸ ಬೇಕು ಎಂಬ ನಿಯಮವೇ ಅವರ ಪರಿಸ್ಥಿತಿಯನ್ನು ಊರ ಹೊರಗೆ ವಾಸಿಸುವ ಭಿಕ್ಕುಗಳಿಗಿಂತ ಬೇರೆಯಾಗಿಸುತ್ತಿತ್ತು. ಕಾಡಿನಲ್ಲಿ ವಾಸಿಸುವ ಭಿಕ್ಕುಗಳು ವಿಮೋಚನೆ ಹೊಂದಿ, ಸಾರ್ವಜನಿಕ ಬದುಕಿಗೆ ವಿಮುಖವಾಗಿ ಬದುಕಬಹುದಾಗಿತ್ತು. ಆದರೆ, ನಗರದ ಒಳಗೇ ಬದುಕಬೇಕಾದ ಭಿಕ್ಕುಣಿಯರು ಪುನಃ ಸಾರ್ವಜನಿಕ ಬದುಕಿಗೆ ಮುಖಾಮುಖಿಯಾಗಲೇಬೇಕಿತ್ತು. ಅಷ್ಟಲ್ಲದೇ ಭಿಕ್ಕುಣಿಯಾಗಲು ಮಹಿಳೆಯರು ತಮ್ಮ ತಂದೆ, ಗಂಡ ಅಥವಾ ಮಗನ ಅನುಮತಿಯನ್ನು ಪಡೆಯಲೇ ಬೇಕಿತ್ತು.




ಥೇರೀಗಾಥಾ ಕಾಣಿಸಿದ ಹೆಣ್ಣು
(ಬೌದ್ಧ ಧರ್ಮದಲ್ಲಿ ಮಹಿಳೆ)
ಲೇ: ಶೈಲಜಾ
ಪುಟ: 156, ಬೆಲೆ: 195 ರೂ.
ಪ್ರಕಾಶನ: ಜೇರುಂಡೆ ಪ್ರಕಾಶನ, ಬೆಂಗಳೂರು
ಮೊಬೈಲ್: 97422 25779.

ಇಷ್ಟಾದರೂ ಭಿಕ್ಕುಣಿಯರು ತಮಗೆ ಸಿಕ್ಕ ಸೀಮಿತ ಅವಕಾಶದಲ್ಲೇ ಹೆಚ್ಚಿನದನ್ನು ಸಾಧಿಸಲು ಪ್ರಯತ್ನಿಸಿದರು. ತಮ್ಮ ಬುದ್ಧಿಶಕ್ತಿ, ಗ್ರಹಿಕೆ, ಸಾಧನೆಯ ಬಲದಿಂದ ಹೆಣ್ಣಿಗೆ ದತ್ತವಾದ ಅಧ್ಯಾತ್ಮವೇ ಬೇರೆಯದು ಎಂದು ತೋರಿಸಿಕೊಟ್ಟರು. ಆ ಕಾಲದ ಹೆಣ್ಣು ಜೀವನವನ್ನು ಹಸಿಹಸಿಯಾಗಿ ತಮ್ಮ ಕವಿತೆಗಳಲ್ಲಿ ಕಾಣಿಸಿದರು. ಥೇರಿ ಪಟಾಚಾರಾ ವಿರಚಿತ ಈ ಪದ್ಯ ಅದಕ್ಕೊಂದು ಉದಾಹರಣೆ.